# ಟೊಮೇಟೊ ದರ ಏರಿಕೆ

ಹೊಸದಿಲ್ಲಿ: ದೇಶದ ಬಹುತೇಕ ಚಿಲ್ಲರೆ ಮಾರುಕಟ್ಟೆಗಳಲ್ಲಿ ಟೊಮೇಟೊ ದರವು ಕಳೆದ 15 ದಿನಗಳಿಂದ ಈಚೆಗೆ ಕೆ.ಜಿಗೆ 80 ರೂಪಾಯಿ ಆಜೂಬಾಜಿನಲ್ಲಿದೆ. ಬೆಳೆ ಹಾಳಾಗಿದ್ದು ಸರಬರಾಜು ಕುಸಿದಿದೆ. ಈ ಪರಿಣಾಮವಾಗಿ ಟೊಮೇಟೊ ದರ ದುಪ್ಪಟ್ಟಾಗಿದೆ.

ತಿಂಗಳ ಆರಂಭದಲ್ಲಿ ಟೊಮೇಟೊ ದರವು ಕೆ.ಜಿಗೆ 20ರಿಂದ 40 ರೂಪಾಯಿ ಇತ್ತು. ಚೆನ್ನೈನಲ್ಲಿ ಮಂಗಳವಾರ ಟೊಮೇಟೊ ದರ 80 ರೂಪಾಯಿ ಇದೆ. ಜೂನ್ 1ರಂದು ಇಲ್ಲಿ ಕೆ.ಜಿಗೆ 44 ರೂಪಾಯಿ ಇತ್ತು. ಕೋಲ್ಕೊತಾದಲ್ಲಿ ತಿಂಗಳ ಆರಂಭದಲ್ಲಿ 30 ರೂಪಾಯಿಯಿದ್ದ ಟೊಮೇಟೊ ದರ ಈಗ 60 ರೂ. ಮುಟ್ಟಿದೆ. ದಿಲ್ಲಿಯಲ್ಲಿ 25 ರೂಪಾಯಿಯಿದ್ದ ಟೊಮೇಟೊ ಈಗ 51 ರೂ. ತಲುಪಿದೆ.

''ಹರಿಯಾಣಾ ಮತ್ತು ಪಂಜಾಬ್‌ನಲ್ಲಿ ಅಕಾಲಿಕ ಮಳೆಯಿಂದ ಟೊಮೇಟೊ ಬೆಳೆ ಹಾಳಾಗಿದೆ. ಹೀಗಾಗಿ ಮಾರುಕಟ್ಟೆಗೆ ಸರಬರಾಜು ಕುಸಿದಿದ್ದು, ದಿಲ್ಲಿ ಸೇರಿದಂತೆ ದೇಶದ ವಿವಿಧೆಡೆ ದರಗಳು ಏರಿಕೆಯಾಗಿವೆ,'' ಎಂದು ಅಜಾದ್‌ಪುರದ ಟೊಮೇಟೊ ವರ್ತಕರ ಸಂಘದ ಅಧ್ಯಕ್ಷ ಅಶೋಕ್ ಕೌಶಿಕ್ ಹೇಳಿದ್ದಾರೆ.

ಕರ್ನಾಟಕ, ಮಧ್ಯಪ್ರದೇಶ, ಆಂಧ್ರ ಪ್ರದೇಶ ಮತ್ತಿತರ ರಾಜ್ಯಗಳು ಟೊಮೇಟೊ ಬೆಳೆಯಲ್ಲಿ ಮುಂಚೂಣಿಯಲ್ಲಿವೆ.